ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಜಿಲ್ಲಾ ಪರಿಷತ್ ಚುನಾವಣೆಗಳನ್ನು ಆರು ತಿಂಗಳು ಮುಂದೂಡುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಜಿಲ್ಲಾ ಪರಿಷತ್ತಿನ ಚುನಾವಣೆಯನ್ನು ಆರು ತಿಂಗಳು ಮುಂದಕ್ಕೆ ಹಾಕುತ್ತೇವೆಂದು ಹೇಳಿ ಸರ್ಕಾರ ಒಂದು ನಿರ್ಧಾರಕ್ಕೆ ಬಂದಿದ್ದಾರೆ ಎಂದು ಹೇಳಿ ಸಂಬಂಧಪಟ್ಟಂತಹ.....

ಶ್ರೀ ಡಿ.ಬಿ. ಚಂದ್ರೇಗೌಡ : ನಾನೂ ಸಹ ಒಂದು ಪತ್ರ ಬರೆದಿದ್ದೇನೆ.

ಉಪಾಧ್ಯಕ್ಷಿಣಿಯವರು : ವಾಟಾಳ್‌ರವರು ವಿಷಯ ಹೇಳಲಿ.?

ಶ್ರೀ ವಾಟಾಳ್ ನಾಗರಾಜ್ : ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮಾತನಾಡಿರಬಹುದು. ನಾನು ಪತ್ರವನ್ನು ಬರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ನಮ್ಮಲ್ಲಿ ವಾದ ಏತಕ್ಕೆ? ಜಿಲ್ಲಾಪರಿಷತ್ ಚುನಾವಣೆಯನ್ನು ಆರು ತಿಂಗಳು ಮುಂದಕ್ಕೆ ಹಾಕುತ್ತೇವೆ ಎಂದು ಹೇಳಿ ಸಂಬಂಧಪಟ್ಟ ಸಚಿವರಾದ ಶ್ರೀಮಾನ್ ಕೆ.ಹೆಚ್. ಪಾಟೀಲರು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದ ನಿರ್ಧಾರ ಇದಾಗಿದ್ದರೆ ಈ ಸದನದಲ್ಲಿ ಅವರು ಒಂದು ಹೇಳಿಕೆಯನ್ನು ಕೊಡಬೇಕಾಗುತ್ತದೆ. ಮತ್ತು ಈ ಸದನದಲ್ಲಿ ಚರ್ಚೆಗೆ ಆದು ಬರಬೇಕಾಗುತ್ತದೆ. ಎಷ್ಟು ದಿವಸ ಮುಂದಕ್ಕೆ ಹಾಕುತ್ತಿದ್ದೀರಿ? ಯಾವ ಕಾರಣಕ್ಕೋಸ್ಕರವಾಗಿ ಮುಂದಕ್ಕೆ ಹಾಕುತ್ತಿದ್ದೀರಿ? ಮುಂದಕ್ಕೆ ಹಾ ಕತಕ್ಕ ವಿಧಾನಗಳು ಏನು? ಯಾವ ಉದ್ದೇಶಕ್ಕಾಗಿ ಮಂದಕ್ಕೆ ಹಾಕುತ್ತಿದ್ದಾರೆ? ಆದು ಬಹಳ ಪ್ರಮುಖ್ಯವಾದಂತಹ ಪ್ರಶ್ನೆ. ಸಾಮಾನ್ಯವಾಗಿ ಪ್ರಜಾತಂತ್ರದಲ್ಲಿ ಪ್ರಜಾತಂತ್ರದ ಈ ವ್ಯವಸ್ಥೆಯನ್ನು ಚುನಾವಣೆಗಳನ್ನು ಮುಂದಕ್ಕೆ ಹಾಕುವ ದೃಷ್ಟಿಯಿಂದ ಇದು ಒಂದು ಬುಡಮೇಲು ಮಾಡತಕ್ಕ ಪ್ರಶ್ನೆ ಆಗುತ್ತದೆ. ಯಾವ ಉದ್ದೇಶಕ್ಕೋಸ್ಕರವಾಗಿ ಸ್ಥಾಪನೆ ಮಾಡಿದಂತಹ ಜಿಲ್ಲಾ ಪರಿಷತ್ತುಗಳನ್ನು ಮತ್ತು ಮಂಡಲ ಪಂಚಾಯಿತಿಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಶಕ್ತಿ ಹೀನ ಮಾಡಿ ಗದಾಪ್ರಹಾರ ಮಾಡುತ್ತಾ ಹೋಗುತ್ತಿದೆ. ಸರ್ಕಾರ ಇವತ್ತು ಏಕ್‌ದಂ ಈ ಸರ್ಕಾರ ಚುನಾವಣೆಯನ್ನು ಮುಂದೂಡತಕ್ಕ ಉದ್ದೇಶ ಸಂಪೂರ್ಣವಾಗಿ ಈ ಜಿಲ್ಲಾ ಪರಿಷತ್ತುಗಳನ್ನು ಮತ್ತು ಮಂಡಲ ಪಂಚಾಯಿತಿಗಳನ್ನು ಮತ್ತು ಈ ಒಂದು ವ್ಯವಸ್ಥೆಯನ್ನು ನಾಶ ಮಾಡಬೇಕು ಎನ್ನತಕ್ಕದ್ದು ಸರ್ಕಾರದ ಉದ್ದೇಶವಿದೆ. ಸರ್ಕಾರ ತೆರೆಮರೆಯಲ್ಲಿ ಈ ರೀತಿಯಾದಂತಹ ಪಿತೂರಿಗೆ ಹೊರಟಿದ್ದಾರೆ. ಇವತ್ತು ಸದನ ಇದೆ. ಆದು ಮಾನ್ಯ ಹಿರಿಯ ಸಚಿವರ ಬಗ್ಗೆ ನನಗೆ ಗೌರವ ಇದೆ. ಈ ಸದನ ನಡೆಯುವಾಗ ಹೊರಗಡೆ ತಮ್ಮ ಕಾರ್ಯಾಲಯದಲ್ಲಿ ಇಂತಹ ಒಂದು ಪ್ರಮುಖವಾದಂದಹ ವಿಚಾರವನ್ನು ಬಹಿರಂಗಪಡಿಸತಕ್ಕದ್ದು ಈ ಸದನದ ಹಕ್ಕಿಗೆ ಚ್ಯುತಿ ಆಗುತ್ತದೆ. ಈ ಸದನದ ಹಕ್ಕಿಗೆ ಮತ್ತೊಂದು ಹಕ್ಕುಚ್ಯುತಿ ನಿರ್ಣಯವನ್ನು ಮಾನ್ಯ ಸಚಿವರ ಮೇಲೆ ತರಬೇಕಾಗುತ್ತದೆ. ಆ ಪ್ರಶ್ನೆ ಇವತ್ತು ಇಲ್ಲಿ ಉದ್ಭವವಾಗುತ್ತದೆ.

11.55 ಎ.ಎಂ

ಉಪಾಧ್ಯಕ್ಷೆಣಿಯವರು : ಈಗ ಮಾನ್ಯ ಸಚಿವರು ಇಲ್ಲ ಮತ್ತು ಈ ವಿಚಾರವನ್ನು ತಾವುಗಳು ಬೇರೆ ಯಾವುದಾದರೂ ರೂಪದಲ್ಲಿ ಕಳುಹಿಸಬಹುದು.

ಶ್ರೀ ವಾಟಾಳ್ - ನಾಗರಾಜ್ : ಅಧ್ಯಕ್ಷರೇ ನಮಗೆ ಇವೊತ್ತು ಮಾತ್ರ ಅವಕಾಶ ಇರುವುದು.

ಶ್ರೀ ಸಿ. ಬೈರೇಗೌಡ : ನಮಗೆ ಇರುವ ಅವಕಾಶ ಎರಡೇ ದಿವಸಗಳಿಗೆ ಸೀಮಿತವಾಗಿದೆ. ಇದು ಬಹಳ ಪ್ರಮುಖವಾಗಿರತಕ್ಕಂಥ ವಿಚಾರ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಆಡಳಿತ ವ್ಯವಸ್ಥೆಯೇ ಕುಸಿದು ಬಿದ್ದಿರತಕ್ಕಂಥ ವಿಚಾರ ಇದು.

ಶ್ರೀ ವಾಟಾಳ್ ನಾಗರಾಜ್ : ಹೇಗೆ ಶಾಸನಸಭೆಯು ನಡೆಯುವಾಗ ಪತ್ರಿಕೆಗಳಲ್ಲಿ ಹೇಳಿಕೆ ಕೊಡುವುದು ಸರಿಯಲ್ಲ, ಅವರು ಉದ್ದೇಶ ಪೂರ್ವಕವಾಗಿ ಮಾಡಿದ್ದಾರೆ. ಎಂದು ನಾನು ಹೇಳುತ್ತಿಲ್ಲ. ನಮಗೆ ಬಹಳ ಗೌರವವಿದೆ. ಪ್ರಜಾಪ್ರಭುತ್ವವನ್ನು ಸಾಮಾನ್ಯವಾಗಿ ನಂಬಿಕೊಂಡಿರತಕ್ಕ ಸಚಿವರಲ್ಲಿ ಅವರು ಒಬ್ಬರು. ಆದರೆ ಇಲ್ಲಿ ಶಾಸನ ಸಭೆ ನಡೆಯುವಾಗ ಹೊರಗಡೆ ಇಂಥ ಪ್ರಮುಖವಾದ ವಿಚಾರಗಳನ್ನು ಹೇಳಿರತಕ್ಕಂಥಾದ್ದು ಒಂದು. ಇದರ ಉದ್ದೇಶ ಏನು? ಈ ಸರಕಾರ ನಿಲುವು ಏನು? ಇದರ ಬಗ್ಗೆ ತಾವುಗಳು ಸ್ಪಷ್ಟಪಡಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸಚಿವರು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿದೆ. ಸರಕಾರವು ಈ ರೀತಿ ಮಾಡಿದರೆ ಮಂಡಲ ಪಂಚಾಯತ್ ಮತ್ತು ಜಿಲ್ಲಾಪರಿಷತ್ ವ್ಯವಸ್ಥೆಯ ಮೇಲೆ ಗದಾ ಪ್ರಹಾರ ಮಾಡಿದ ಹಾಗೆ ಆಗುತ್ತದೆ. ಈ ಒಂದು ಪದ್ಧತಿಯ ಮೇಲೆ ಅನ್ಯಾಯವನ್ನು ಮಾಡಿದ ಹಾಗೆ ಆಗುತ್ತದೆ. ಸರಕಾರ ಈ ಒಂದು ದಿಕ್ಕಿನಲ್ಲಿ ಹೋಗಕೂಡದು ಸರಿಯಾದ ಸಮಯದಲ್ಲಿ ಚುನಾವಣೆಗಳು ನಡೆಯಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಬಹಳ ಮುಖ್ಯವಾದಂಥ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ಸದನವು ನಡೆಯತಕ್ಕಂಥ ಸಂದರ್ಭಗಳು ಮಂತ್ರಿಗಳು ಇಂಥ ಪ್ರಮುಖವಾದಂಥ ಅಂಶಗಳನ್ನು ಸಾರ್ವಜನಿಕವಾಗಿ ಹೇಳಿ ಕೊಡುವುದರ ಮೂಲಕ ಸದನದ ಗೌರವಕ್ಕೆ ಚ್ಯುತಿ ತರತಕ್ಕಂಥ ಕಾರ್ಯ ನಡೆಯಬಾರದು. ಈ ವಿಚಾರದಲ್ಲಿ ಪದೇ ಪದೇ ನಾವುಗಳು ಚರ್ಚೆ ಮಾಡಿದ್ದೇವೆ. ಆದರೆ ಪುನಃ ಆಗುತ್ತಿದೆ. ಆದ್ದರಿಂದ ಮಂತ್ರಿಗಳು ಅಂಥ ಹೇಳಿಕೆಯನ್ನು ಅಥವಾ ಇಂಗಿತವನ್ನು ಪತ್ರಿಕೆಗಳಿಗೆ ಹೇಳಿದ್ದಾರೆಯೇ ಇದು ನಮಗೆ ಗೊತ್ತಾಗಬೇಕು. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳಿಂದ ಒಂದು ಹೇಳಿಕೆಯನ್ನು ಕೊಡಬೇಕು. ಅದನ್ನು ಬಿಟ್ಟು ಮಾನ್ಯ ಸಂಸದೀಯ ಸಚಿವರು ಎದ್ದುನಿಂತು ನಮಗೆ ಏನಾದರೂ ಒಂದು ಉತ್ತರ ಹೇಳಿಬಿಟ್ಟರೆ ಅದು ಉತ್ತರವಾಗುವುದಿಲ್ಲ.

ಶ್ರೀ ಎಂ ವೀರಪ್ಪ ಮೊಯಿಲಿ : ಸನ್ಮಾನ್ಯ ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು ಮತ್ತು ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ಚಂದ್ರೇಗೌಡರು ಮತ್ತಿತರರು ಏನು ವಿಷಯವನ್ನು ಎತ್ತಿದ್ದಾರೆ. ನಾನು ಅದು ಗಂಭೀರವಾದ ವಿಚಾರ ಎಂದು ಒಪ್ಪಿಕೊಳ್ಳುತ್ತೇನೆ. ಅದು ಸರಕಾರದ ನೀತಿಗೆ ಸಂಬಂಧಪಟ್ಟಂಥ ವಿಚಾರ. ಆದ್ದರಿಂದ ಇವೊತ್ತು ಸಂಜೆಯ ಒಳಗಡೆ ಈ ಬಗ್ಗೆ ಸರಕಾರದ ಮತಿಯಿಂದ ಹೇಳಿಕೆಯನ್ನು ಕೊಡಿಸುತ್ತೇವೆ.